# ಕನ್ನಡ ಸಾಹಿತ್ಯ ಪರಿಷತ್ತು

ಸ್ಥಾಪನೆ : ೧೯೧೫

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮
ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪ ಫ್ಯಾಕ್ಸ್ : ೨೬೫೨೩೮೬೭
http://www.kasapa.in e-mail : kannadaparishattu@gmail.com


ಕ್ರಮಸಂಖ್ಯೆ : ಕಸಾಪ / ಪತ್ರಿಕಾ ಪ್ರಕಟಣೆ / ೨೦೨೨-೨೩ ದಿನಾಂಕ : ೨೬-೦೪-೨೦೨೨


ಶ್ರೀಮತಿ ಗಾಯತ್ರಿ ರಾಮಣ್ಣ


ಶ್ರೀ ಎಂ ರಾಮೇಗೌಡ

ಇವರಿಗೆ

ಸಂಪಾದಕರು / ಮುಖ್ಯ ವರದಿಗಾರರು
.......................................ಬೆಂಗಳೂರು

ಮಾನ್ಯರೆ,

**ಪತ್ರಿಕಾ ಹೇಳಿಕೆ – ಪ್ರಕಟಣೆ ಕೃಪೆಗಾಗಿ**

## ಕನ್ನಡಪರ ಹೋರಾಟಗಾರ್ತಿ
# ಶ್ರೀಮತಿ ಗಾಯತ್ರಿ ರಾಮಣ್ಣ
## ಹಾಗೂ
## ಕನ್ನಡಪರ ಹೋರಾಟಗಾರರಾದ
# ಶ್ರೀ ಎಂ. ರಾಮೇಗೌಡ, ಮೈಸೂರು
## ಇವರುಗಳಿಗೆ

## ಕನ್ನಡ ಸಾಹಿತ್ಯ ಪರಿಷತ್ತಿನ
# ‘ಕನ್ನಡ ಚಳವಳಿ ವೀರಸೇನಾನಿ ಮ. ರಾಮಮೂರ್ತಿ ದತ್ತಿ ಪ್ರಶಸ್ತಿ’

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ **ನಾಡೋಜ ಡಾ. ಮಹೇಶ ಜೋಶಿ ಅವರ ಅಧ್ಯಕ್ಷತೆಯಲ್ಲಿ** ನಡೆದ ಆಯ್ಕೆ ಸಮಿತಿ ಸಭೆಯಲ್ಲಿ **‘ಕನ್ನಡ ಚಳವಳಿ ವೀರಸೇನಾನಿ ಮ. ರಾಮಮೂರ್ತಿ ದತ್ತಿ ಪ್ರಶಸ್ತಿ’**ಗೆ **೨೦೨೧ನೆಯ** ಸಾಲಿಗೆ ಕನ್ನಡಪರ ಹೋರಾಟಗಾರ್ತಿ **ಶ್ರೀಮತಿ ಗಾಯತ್ರಿ ರಾಮಣ್ಣ** ಹಾಗೂ **೨೦೨೨ನೆಯ** ಸಾಲಿಗೆ ಕನ್ನಡಪರ ಹೋರಾಟಗಾರರಾದ **ಶ್ರೀ ಎಂ. ರಾಮೇಗೌಡ, ಮೈಸೂರು** ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಪ್ರಶಸ್ತಿಯು **ತಲಾ ರೂ. ೨೫,೦೦೦ (ಇಪತ್ತೈದು ಸಾವಿರ ಮಾತ್ರ)**ಗಳ ನಗದು, ಸ್ಮರಣಿಕೆ ಹಾಗೂ ಫಲ ತಾಂಬೂಲಗಳನ್ನೂ ಒಳಗೊಂಡಿರುತ್ತದೆ.

ಪುಟ...೨ಕ್ಕೆ

**ಶ್ರೀಮತಿ ಗಾಯತ್ರಿ ರಾಮಣ್ಣ ಅವರು** ೧೯೭೯ರಲ್ಲಿ ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿ ವೃತ್ತಿ ಆರಂಭಿಸಿದರು. ಸುಗಮ ಸಂಗೀತ, ಕಾವ್ಯ ರಚನೆಯಲ್ಲಿ ಇವರಿಗೆ ಹೆಚ್ಚಿನ ಆಸಕ್ತಿ. ಕನ್ನಡಪರ ಹೋರಾಟಗಳಲ್ಲಿ ಭಾಗವಹಿಸಿದ್ದ ಇವರು ಕನ್ನಡ ಸಂಘರ್ಷ ಸಮಿತಿಯ ಅಧ್ಯಕ್ಷರಾಗಿ ಕನ್ನಡಪರ ಚಟುವಟಿಕೆಗಳಲ್ಲಿ ತಮ್ಮನ್ನು ಹೆಚ್ಚು ತೊಡಗಿಸಿಕೊಂಡಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯೆ, ಮಹಿಳಾ ಪ್ರತಿನಿಧಿ ಹಾಗೂ ಗೌರವ ಸಂಚಾಲಕಿಯಾಗಿ ಕಾರ್ಯನಿರ್ವಹಿಸಿರುತ್ತಾರೆ. ಕಳೆದ ಹಲವು ವರ್ಷಗಳಿಂದ ಸುಗಮ ಸಂಗೀತ ಗಾಯನ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುತ್ತಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ, ಉದ್ಯಾನದಲ್ಲಿ ಉದಯರಾಗ, ಉದ್ಯಾನದಲ್ಲಿ ಸಂಧ್ಯಾರಾಗ ಕಾರ್ಯಕ್ರಮಗಳಲ್ಲಿ, ಸುಗಮ ಸಂಗೀತ, ಜನಪದಗೀತೆ ಹಾಗೂ ವಚನಗಳ ಗಾಯನ ಸಾದರಪಡಿಸಿದ್ದಾರೆ.

**ಬುದ್ಧನಿಗೊಂದಿಷ್ಟು ಕರುಣೆ ತೋರಿ, ಕನ್ನಡನುಡಿ ಮಲ್ಲಿಗೆ, ಕಾರ್ಗಿಲ್ ಕವನಗಳು ಹಾಗೂ ವಸಂತ ಪಲ್ಲವ, ಕನ್ನಡ ಜನ–ಕನ್ನಡ ಮನ, ಕನ್ನಡನಾಡು ನುಡಿ** ಮೊದಲಾದ ಕವನ ಸಂಕಲನಗಳು ಪ್ರಕಟಗೊಂಡಿವೆ. ನಾಡಿನ ವಿವಿಧ ದೈನಿಕ ಹಾಗೂ ನಿಯತಕಾಲಿಕೆಗಳಲ್ಲಿ ಸ್ವರಚಿತ ಕವನಗಳು ಪ್ರಕಟವಾಗಿವೆ. ಕರ್ನಾಟಕ ಲೇಖಕಿಯರ ಸಂಘದಿಂದ ಇಂದಿರಾ ದತ್ತಿ ಪ್ರಶಸ್ತಿ, ಉತ್ತಮ ಶಿಕ್ಷಕಿ ಪ್ರಶಸ್ತಿ, ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ ಹಾಗೂ ಸಂಗೀತ, ಶಿಕ್ಷಣ, ಸಾಹಿತ್ಯ ಕ್ಷೇತ್ರಗಳಲ್ಲಿನ ಸೇವೆಗಾಗಿ ಸಂಘ–ಸಂಸ್ಥೆಗಳಿಂದ ಗೌರವ, ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

* * * *

**ಶ್ರೀ ಎಂ. ರಾಮೇಗೌಡರು** ಮೈಸೂರಿನಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಕನ್ನೇಗೌಡ ಕೊಪ್ಪಲಿನ ಶಾಲೆಯಲ್ಲಿ ಓದಿದ ಇವರು ಅನಂತರ ಪ್ರೌಢ ಶಿಕ್ಷಣವನ್ನು ಶಾರದಾ ವಿಲಾಸ್ ಶಿಕ್ಷಣ ಸಂಸ್ಥೆಯಲ್ಲಿ ಓದಿ, ಕಾಲೇಜು ಶಿಕ್ಷಣವನ್ನು ಕೂಡ ಅಲ್ಲೇ ಮುಗಿಸಿದರು. ಕನ್ನಡ ಅಭಿಮಾನದಿಂದ ಬಾಲ್ಯದಲ್ಲೇ ಹಿಂದಿ ವಿರೋಧಿ ಚಳುವಳಿಗೆ ಧುಮುಕಿದ್ದು ಕನ್ನಡ ಹೋರಾಟಕ್ಕೆ ಇತಿಹಾಸ ಸೃಷ್ಟಿಸಿದ ಗೋಕಾಕ್ ಚಳವಳಿಗಳಲ್ಲಿ ಡಾ. ರಾಜ್‌ಕುಮಾರ್ ಅವರ ಜೊತೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಅಖಿಲ ಕರ್ನಾಟಕ ಡಾ. ರಾಜಕುಮಾರ್ ಅಭಿಮಾನಿಗಳ ಸಂಘದ ಸ್ಥಾಪಕ ಅಧ್ಯಕ್ಷರಾಗಿ, ಕರ್ನಾಟಕ ರಕ್ಷಣಾ ವೇದಿಕೆಯಲ್ಲಿ ರಾಜ್ಯ ಉಪಾಧ್ಯಕ್ಷರಾಗಿ ಹಾಗೂ ಜಯಕರ್ನಾಟಕದಲ್ಲಿ ರಾಜ್ಯ ಪ್ರಧಾನ ಸಂಚಾಲಕರಾಗಿ ಸೇವೆ ಸಲ್ಲಿಸಿ ಈಗಲೂ ಕೂಡ ಕನ್ನಡಕ್ಕಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಈ **ದತ್ತಿ ಪ್ರಶಸ್ತಿ** ಆಯ್ಕೆ ಸಮಿತಿಯ ಸಭೆಯಲ್ಲಿ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ **ಶ್ರೀ ಎಂ. ಪ್ರಕಾಶಮೂರ್ತಿ,** ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ **ಶ್ರೀ ನೇ.ಭ ರಾಮಲಿಂಗಶೆಟ್ಟಿ,** ಗೌರವ ಕೋಶಾಧ್ಯಕ್ಷರಾದ **ಶ್ರೀ ಬಿ.ಎಂ. ಪಟೇಲ್‌ಪಾಂಡು** ಅವರುಗಳು ಉಪಸ್ಥಿತರಿದ್ದರು.

**(ನೇ.ಭ. ರಾಮಲಿಂಗಶೆಟ್ಟಿ)**
ಗೌರವ ಕಾರ್ಯದರ್ಶಿಗಳು

---

* **ದಯವಿಟ್ಟು ಇದನ್ನು ರಾಜ್ಯಮಟ್ಟದ ಸುದ್ದಿಯಾಗಿ ಪ್ರಕಟಿಸಲು ಕೋರಿದೆ.**